# ***4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು***

**ಎಸ್‌ಸಿ. 68/2024**

| | | | |
|---|---|---|---|
| **ಸಾಕ್ಷಿದಾರರ ಹೆಸರು** | ಃ ಶ್ರೀಮತಿ ಮಹದೇವಮ್ಮ | | ಪ್ರಮಾಣ ಮಾಡಿಸಿದ ದಿನಾಂಕಃ |
| **ತಂದೆ/ಗಂಡನ ಹೆಸರು** | ಃ ಶ್ರೀ ಪರಶಿವಪ್ಪ | | **25.11.2024** |
| **ವಯಸ್ಸು** | ಃ 55 ವರ್ಷ | | |
| **ವೃತ್ತಿ** | ಃ ಗೃಹಿಣಿ | **ಪ್ರಾ.ಸಾ.** | ಃ **01** |
| **ವಾಸಸ್ಥಳ** | ಃ ಮರಹಳ್ಳಿಪುರ | **ಚಾ.ಸಾ.** | ಃ **01** |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

. ಮೃತ ಪರಶಿವಪ್ಪ ನನ್ನ ಗಂಡನಿರುತ್ತಾನೆ. 2 ನೇ ಆರೋಪಿ ನನ್ನ ಭಾವನಿದ್ದು, 1 ನೇ ಆರೋಪಿ 2 ನೇ ಆರೋಪಿಯ ಮಗನಿರುತ್ತಾನೆ . ನಮಗೆ ನಮ್ಮ ಗ್ರಾಮದಲ್ಲಿ *2* ಎಕರೆ *13* ಗುಂಟೆ ಜಮೀನು ಇದೆ. ಆರೋಪಿತರ ಜಮೀನು ನಮ್ಮ ಜಮೀನಿನ ಪಕ್ಕದಲ್ಲಿದೆ. ಆರೋಪಿತರು ನಮ್ಮ ಜಮೀನಿನ ಮೂಲಕ ಅವರ ಜಮೀನಿಗೆ ಹೋಗುತ್ತಿದ್ದರು. ಜಮೀನಿನ ವಿಚಾರಕ್ಕೆ ನಮಗೂ ಹಾಗೂ ಆರೋಪಿತರಿಗೂ ಮಾತುಕತೆ ಇರಲಿಲ್ಲ. ಆರೋಪಿತರು ನಮ್ಮ ಜಮೀನಿನಲ್ಲಿ ದನಕರುಗಳನ್ನು ಮೇಯಿಸುತ್ತಿದ್ದರು, ಅ ಕುರಿತು ನಮಗೂ ಅವರಿಗೂ ಆಗಾಗ ಗಲಾಟೆ ಆಗುತ್ತಿತ್ತು. ಅ ಕಾಲಕ್ಕೆ ನಾವು ನಮ್ಮ ಜಮೀನನ್ನು ಬೆಳೆ ಮಾಡುವ ಸಲುವಾಗಿ ದಾರಿಯಲ್ಲಿದ್ದ ಮರವನ್ನು ಕಡಿಸಿದ್ದೆವು. ದಿಃ *29.11.2023* ರಂದು ಸಂಜೆ *5* ಗಂಟೆಯಲ್ಲಿ ನಾನು ಮತ್ತು ನನ್ನ ಗಂಡ ಜಮೀನಿನಲ್ಲಿ ಇದ್ದೆವು. ಆ ಕಾಲಕ್ಕೆ ಆರೋಪಿತರು ಅಲ್ಲಿಗೆ ಬಂದು ನಾವು

ಕಡಿಸಿದ್ದ ಮರವನ್ನು ದಾರಿಯಲ್ಲೆ ಬಿಟ್ಟಿದ್ದ ಕಾರಣಕ್ಕೆ ನಮ್ಮೊಂದಿಗೆ ಜಗಳ ತೆಗೆದು ನಮಗೆ ಬೈದಿದ್ದರು.

ಅ ಕಾಲಕ್ಕೆ 2 ನೇ ಆರೋಪಿ ಕೊಚ್ಚಿ ಹಾಕೋನಾ ಎಂದು 1 ನೇ ಆರೋಪಿಗೆ ಕುಮ್ಮಕ್ಕು ಕೊಟ್ಟಿದ್ದ, ಆಗ 1 ನೇ ಆರೋಪಿ ನನ್ನ ಗಂಡನಿಗೆ ಮಣ್ಣು ಎರಚಿ ಮಚ್ಚಿ ನಿಂದ ಕೈ ಕಾಲುಗಳಿಗೆ ಹೊಡೆದಿದ್ದ. ಆಗ 2 ನೇ ಆರೋಪಿ ನನ್ನ ಜುಟ್ಟನ್ನು ಹಿಡಿದು ಎಳೆದುಕೊಂಡು ಹೋಗಿದ್ದ. ಆರೋಪಿತ ಹಾಗೆ ಹೊಡೆದಿದ್ದಾಗ ನನ್ನ ಗಂಡ ಕೆಳಗೆ ಬಿದ್ದನು. ಆರೋಪಿತ ಹೊಡೆಯುತ್ತಿರುವಾಗಲೇ ನನ್ನ ಅಳಿಯಮಹೇಶನಿಗೆ ಫೋನ್ ಮಾಡಿ ಹೇಳಿದ್ದ. ಅದೇ ಸಮಯಕ್ಕೆ 1 ನೇ ಆರೋಪಿ ನನ್ನ ತಮ್ಮ ಮಹದೇವಸ್ವಾಮಿಗೆ ಫೋನ್ ಮಾಡಿ ನಿನ್ನ ಭಾವನನ್ನು ಕೊಚ್ಚಿ ಹಾಕಿದ್ದೇನೆ ತೆಗೆದುಕೊಂಡು ಹೋಗು ಬಾ ಎಂದು ಹೇಳಿದ. ಅ ಕಾಲಕ್ಕೆ ನನ್ನ ಅಳಿಯ ಮತ್ತು ತಮ್ಮ ಅಲ್ಲಿಗೆ ಬಂದಿದ್ದರು. ಅವರು ಬರುವವರೆಗೆ 1 ನೇ ಆರೋಪಿ ನನ್ನ ಗಂಡನಿಗೆ ಮಚ್ಚಿನಿಂದ ಹೊಡೆದಿದ್ದ. ಆಗ ನನ್ನ ಅಳಿಯ ಮತ್ತು ತಮ್ಮ ಅಂಬುಲೆನ್ಸ ಕರೆ ಮಾಡಿದ್ದು ಆದರೆ ಅಂಬುಲೆನ್ಸ್ ದೊರಕದೆ ಇದ್ದುದರಿಂದ ನಮ್ಮ ಗ್ರಾಮದ ಒಮಿನಿ ಕಾರಿನಲ್ಲಿ ನನ್ನ ಗಂಡನನ್ನು ಮೈಸೂರಿನ ಮಿಷನ್ ಆಸ್ಪತ್ರೆಗೆ ಕರೆದುಕೊಂಡು ಹೊದೆವು. ನನ್ನ ಅಳಿಯ ಮತ್ತು ತಮ್ಮ ಬಂದ ಬಳಿಕ ಆರೋಪಿತರು ಅಲ್ಲಿಂದ ಓಡಿಹೋಗಿದ್ದರು. ಮಿಷನ್ ಆಸ್ಪತ್ರೆಯಲ್ಲಿ ನನ್ನ ಗಂಡ ರಾತ್ರಿ 1 ಗಂಟೆ 10 ನಿಮಿಷಕ್ಕೆ ಮರಣ ಹೊಂದಿದ್ದ.

ದಿಃ 30.11.2023 ರಂದು ನನ್ನ ಇನ್ನೊಬ್ಬ ಭಾವ ನ ಮಗ ಮಹದೇವಸ್ವಾಮಿ ಮೂಲಕ ದೂರನ್ನು ಬರೆಯಿಸಿ ಪೊಲೀಸ್ ಠಾಣೆಗೆ ಕೊಟ್ಟಿದ್ದೆ. ಈಗ ನಾನು ನೋಡುತ್ತಿರುವ ದೂರು ಅದೇ ಇದ್ದು ಅದರಲ್ಲಿ ನನ್ನಸಹಿ ಇದೆ. ಸದರಿ ದೂರನ್ನು ನಿಪಿ.1 ಎಂದು, ಸಾಕ್ಷಿಯ ಸಹಿಯನ್ನು

ನಿಪಿ.1(ಎ) ಎಂದು ಗುರುತಿಸಿದೆ. ಆರೋಪಿತರು ಹೊಡೆದಿದ್ದರಿಂದ ನನ್ನ ಗಂಡನ ಎರಡು ಕೈಗಳಿಗೆ ಹಾಗೂ ಕಾಲುಗಳಿಗೆ ಗಾಯಗಳಾಗಿದ್ದವು.

ದಿಃ 05.12.2023 ರಂದು ನಂಜನಗೂಡಿನ ನ್ಯಾಯಾಲಯದಲ್ಲೂ ಸಹ ನನ್ನ ಹೇಳಿಕೆ ಕೊಟ್ಟಿದ್ದೇನೆ. ಈಗ ನಾನು ನೋಡುತ್ತಿರುವ ಹೇಳಿಕೆ ಅದೇ ಇದ್ದು ಅದರಲ್ಲಿ ನನ್ನ ಸಹಿ ಇದೆ. ಸದರಿ ಹೇಳಿಕೆಯನ್ನು ನಿಪಿ.2 ಎಂದು, ಸಾಕ್ಷಿಯ ಸಹಿಯನ್ನು ನಿಪಿ.2(ಎ) ಎಂದು ಗುರುತಿಸಿದೆ. ಸರ್ಕಾರಿ ಆಸ್ಪತ್ರೆಯಲ್ಲಿ ಬೇಗ ಚಿಕಿತ್ಸೆ ಸಿಗುವುದಿಲ್ಲ ಮತ್ತು ನನ್ನ ಗಂಡನಿಗೆ ಜಾಸ್ತಿ ಏಟಾಗಿದೆ ಎನ್ನುವ ಕಾರಣಕ್ಕೆ ಅವರನ್ನು ನೇರವಾಗಿ ವಿಷನ್ ಆಸ್ಪತ್ರೆಗೆ ಕರೆದುಕೊಂಡು ಹೋದೆವು. ಈಗ ನನಗೆ ತೋರಿಸುತ್ತಿರುವ ಮಚ್ಚು ಅ ದಿನ 1ನೇ ಆರೋಪಿ ನನ್ನ ಗಂಡನಿಗೆ ಹೊಡೆಯಲು ಉಪಯೋಗಿಸಿದ್ದ ಮಚ್ಚು ಇದ್ದು, ಸದರಿ ಮಚ್ಚನ್ನು ಮು.ಮಾ - 1 ಎಂದು ಗುರುತಿಸಿದೆ. ಈಗ ನನಗೆ ನೋಡುತ್ತಿರುವ ಶರ್ಟ್ , ಬನಿಯನ್, ಅಂಡರ್ ವೇರ್ , ಪಂಚೆ ಅ ಘಟನಾ ಕಾಲಕ್ಕೆ ನನ್ನ ಗಂಡ ಧರಿಸಿದ್ದ ಬಟ್ಟೆಗಳಿವೆ. ಸದರಿ ಬಟ್ಟೆಗಳನ್ನು ಅನುಕ್ರಮವಾಗಿ ಮೂ.ಮಾ 2 ರಿಂದ 5 ಎಂದು ಗುರುತಿಸಿದೆ.

ಪಾಟೀ ಸವಾಲು ಃ ಈ ವರೆಗೆ ಆರೋಪಿ ಪರ ವಕೀಲರು ಗೈರು ಹಾಜರಿದ್ದು, ಆರೋಪಿತರು ಸಮಯ ಕೋರಿದ್ದು ಸೂಕ್ತ ಕಾರಣವಿಲ್ಲದಿದ್ದರಿಂದ, ಪಾಟೀ ಸವಾಲನ್ನು ಇಲ್ಲ ಎಂದು ತೆಗೆದು ಕೊಳ್ಳಲಾಯಿತು.

ಮರು ವಿಚಾರಣೆಃ- ಇಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

*ಓ ಹೇ ಕೇ ಸ ಇ ಎ ಒ.,*

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
*ಮೈಸೂರು*